ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1792
ಸದಸ್ಯರ ಹೆಸರು	:	ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	24.03.2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿ ಗ್ರಾಮ ಪಂಚಾಯಿತಿಯನ್ನು ನಗರ ಪಂಚಾಯಿತಿಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)	ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿ ಗ್ರಾಮ ಪಂಚಾಯಿತಿ ಯೊಂದಿಗೆ ಮೆನ್ನಬೆಟ್ಟು ಹಾಗೂ ಕಟೀಲು ಗ್ರಾಮ ಪಂಚಾಯಿತಿಯನ್ನು ಒಟ್ಟುಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುತ್ತದೆ.
(ಆ)	ಕಿನ್ನಿಗೋಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಜನಸಂಖ್ಯೆ ಎಷ್ಟು; ಮತ್ತು ಭೌಗೋಳಿಕ ವಿಸ್ತೀರ್ಣ ಎಷ್ಟು; (ವಿವರ ನೀಡುವುದು)	2011ರ ಜನಗಣತಿಯನುಸಾರ ಕಿನ್ನಿಗೋಳಿ ಗ್ರಾಮದ ಜನಸಂಖ್ಯೆಯು 8126, ಮೆನ್ನಬೆಟ್ಟು ಗ್ರಾಮದ ಜನಸಂಖ್ಯೆ 4374 ಹಾಗೂ ಕಟೀಲು ಗ್ರಾಮ ಪಂಚಾಯಿತಿಯ ಜನಂಖ್ಯೆ 4490 ಇದ್ದು, ಒಟ್ಟು ಜನಸಂಖ್ಯೆ 16990 ಆಗುತ್ತದೆ. ಕಿನ್ನಿಗೋಳಿ ಪ್ರದೇಶದ ವಿಸ್ತೀರ್ಣ 15.33 ಚ.ಕಿ.ಮೀ, ಮೆನ್ನಬೆಟ್ಟು ಪ್ರದೇಶದ ವಿಸ್ತೀರ್ಣ 5.519 ಹಾಗೂ ಕಟೀಲು ಗ್ರಾಮ ಪಂಚಾಯಿತಿಯ 16.54 ಇದ್ದು, ಒಟ್ಟು 37.38 ಪ್ರತಿ ಚ.ಕಿ.ಮೀ ಆಗುತ್ತದೆ.
(ಇ)	ಕಿನ್ನಿಗೋಳಿ ಗ್ರಾಮ ಪಂಚಾಯತ್ ನಗರ ಪಂಚಾಯತ್ ಆಗಿ ಪರಿವರ್ತನೆ ಮಾಡಲು ಗ್ರಾಮ ಪಂಚಾಯತ್‌ಯಿಂದ ಬೇಡಿಕೆ ಬಂದಿದೆಯೇ; ಬಂದಿದ್ದಲ್ಲಿ ಅದರ ವಿವರ ನೀಡುವುದು; ಗ್ರಾಮ ಪಂಚಾಯಿತಿಗಿರುವ ಆದಾಯ ಎಷ್ಟು;	ಕಿನ್ನಿಗೋಳಿ ಗ್ರಾಮ ಪಂಚಾಯಿತಿಯಲ್ಲಿ ಸಾಮಾನ್ಯ ಸಭೆಯ ನಿರ್ಣಯ ಸಂ:36/2018-19, ದಿ:25.09.2018 ರಲ್ಲಿ, ಮೆನ್ನಬೆಟ್ಟು ಗ್ರಾಮ ಪಂಚಾಯಿತಿಯಲ್ಲಿ ಸಾಮಾನ್ಯ ಸಭೆಯ ನಿರ್ಣಯ ಸಂ:84(10)/2017-18, ದಿ:09.08.2017 ರಲ್ಲಿ ಹಾಗೂ ಕಟೀಲು ಗ್ರಾಮ ಪಂಚಾಯಿತಿಯಲ್ಲಿ ನಿರ್ಣಯ ಸಂಖ್ಯೆ:98/2019-20, ದಿ:12.12.2019 ರಲ್ಲಿ ತೀರ್ಮಾನ ಕೈಗೊಂಡಿರುತ್ತಾರೆ. ಸದರಿ ತೀರ್ಮಾನಗಳನ್ವಯ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. **<u>ರಾಜಸ್ವ (2015-16)</u>** ತೆರಿಗೆ ಸ್ವೀಕೃತಿ:1784075.00(ಕಿನ್ನಿಗೋಳಿ) 2255396.00(ಮೆನ್ನಬೆಟ್ಟು) 658290.00(ಕಟೀಲು)

		ತೆರಿಗೆಯೇತರ ಸ್ವೀಕೃತಿ: 21301803.00(ಕಿನ್ನಿಗೋಳಿ) 477648.00(ಮೆನ್ನಬೆಟ್ಟು) 508486.00(ಕಟೀಲು) ರಾಜಸ್ವ (2016-17) ತೆರಿಗೆ ಸ್ವೀಕೃತಿ:2425394(ಕಿನ್ನಿಗೋಳಿ) 1849954.00(ಮೆನ್ನಬೆಟ್ಟು) 1289882(ಕಟೀಲು) ತೆರಿಗೆಯೇತರ ಸ್ವೀಕೃತಿ: 22805829(ಕಿನ್ನಿಗೋಳಿ) 609641(ಮೆನ್ನಬೆಟ್ಟು) 854512(ಕಟೀಲು) ರಾಜಸ್ವ (2017-18) ತೆರಿಗೆ ಸ್ವೀಕೃತಿ:3517762.00(ಕಿನ್ನಿಗೋಳಿ) 2096451.00(ಮೆನ್ನಬೆಟ್ಟು) 1116501.00(ಕಟೀಲು) ತೆರಿಗೆಯೇತರ ಸ್ವೀಕೃತಿ: 22095736.00(ಕಿನ್ನಿಗೋಳಿ) 661762.00(ಮೆನ್ನಬೆಟ್ಟು) 593585.00(ಕಟೀಲು)
(ಈ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳನ್ನು ನಗರ ಪಂಚಾಯಿತಿಗಳು/ ಪುರಸಭೆ/ ನಗರಸಭೆ ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೇ? (ವಿವರ ನೀಡುವುದು).	ದಕ್ಷಿಣ ಕನ್ನಡ ಜಿಲ್ಲೆಯ ಈ ಕೆಳಕಂಡ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುತ್ತವೆ. 1) ಪುತ್ತೂರು ತಾಲ್ಲೂಕಿನ ಕಡಬ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೆಗೇರಿಸಿ ದಿನಾಂಕ:19.03.2020ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಅಂತಿಮ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. 2) ಮಂಗಳೂರು ತಾಲ್ಲೂಕಿನ ಬಜಪೆ ಮತ್ತು ಮಳವೂರು ಗ್ರಾಮ ಪಂಚಾಯಿತಿ. 3) ಮಂಗಳೂರು ತಾಲ್ಲೂಕಿನ ಮೆನ್ನಬೆಟ್ಟು, ಕಿನ್ನಿಗೋಳಿ ಮತ್ತು ಕಟೀಲು.

ಸಂಖ್ಯೆ: ನಅಇ 19 ಎಲ್‌ಸಿಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು